# ಸಂಸತ್ತಿನ ಪ್ರಶ್ನಾವಳಿ

**ಪಂಕಜ ಹೆಚ್. ಪಿ.**

ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಜೆ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ, ಚಾಮರಾಜನಗರ.

**Received: 15-04-2024 ; Acepted: 03-06-2024 ; Published: 09-07-2024**

**DOI: https://doi.org/10.5281/zenodo.12672909**

**ABSTRACT:**

ಭಾರತದ ಸಂವಿಧಾನ ವಿಶ್ವದ ಅತ್ಯಂತ ಬೃಹತ್ ಸಂವಿಧಾನ ಮತ್ತು ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು ಆಡಳಿತದ ಅನುಕೂಲಕ್ಕಾಗಿ ದ್ವಿಸದನಗಳನ್ನೊಳಗೊಂಡ ಸಂಸತ್ ವ್ಯವಸ್ಥೆ ರಚನೆಯಾಗಿದೆ. ಪಾರ್ಲಿಮೆಂಟ್‌ನಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರ ಅಧಿಕಾರ ದುರುಪಯೋಗ ಆಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಸಂಬಂಧ ಎಲ್ಲಾ ಸದಸ್ಯರು ಸಾರ್ವಜನಿಕ ಮಸೂದೆಯಾಗಲಿ ಖಾಸಗಿ ಮಸೂದೆಯಾಗಲಿ ವಿಷಯಕ್ಕೆ ಸಂಬಂಧಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಪಾರ್ಲಿಮೆಂಟ್ ನಲ್ಲಿ ಸಭೆಯ ನಿರ್ಣಯಗಳನ್ನು ಗೌರವಿಸುವ ಉದ್ದೇಶ ಹಾಗೂ ವ್ಯವಸ್ಥಿತ ರೀತಿಯಲ್ಲಿ ಸಭೆಯ ನಡಾವಳಿಗಳನ್ನು ಪಾಲಿಸಬೇಕು ಎಂಬ ಉದ್ದೇಶದಿಂದ ಪ್ರಶ್ನೆ ಕೇಳುವ ಅವಕಾಶ ಮತ್ತು ಉತ್ತರ ನೀಡಲು ಬೇಕಾಗುವ ಸುವ್ಯವಸ್ಥಿತ ಕ್ರಿಯೆಯಾಗಿದೆ.

**KEYWORDS:**

ಭಾರತದ ಸಂವಿಧಾನ, ಪ್ರಜಾಪ್ರಭುತ್ವ ರಾಷ್ಟ್ರ, ದ್ವಿಸದನ, ಸಂಸತ್ ವ್ಯವಸ್ಥೆ, ಲೋಕಸಭೆ, ರಾಜ್ಯಸಭೆ, ಪ್ರಶ್ನಾವಳಿ.

## ಪೀಠಿಕೆ:

ಸಾರ್ವಜನಿಕರಲ್ಲಿ ಸಾಮಾನ್ಯವಾಗಿ ಸಂಸತ್ತಿನಲ್ಲಿ ನಡೆಯುವ ಯಾವುದೇ ರೀತಿಯ ಮಸೂದೆ ಮಂಡನೆಯ ವ್ಯವಸ್ಥೆ, ಪ್ರಶ್ನೆವೇಳೆ, ಶೂನ್ಯವೇಳೆ, ಸಾರ್ವಜನಿಕ ಕುಂದುಕೊರತೆಯ ಬಗ್ಗೆ ತಿಳುವಳಿಕೆಯಿರುವುದಿಲ್ಲ. ಆದರೆ ಸಂಸತ್ತಿನಲ್ಲಿ ಕೇಳುವ ಪ್ರಶ್ನೆಗಳ ಬಗ್ಗೆ ಬಹಳ ಕುತೂಹಲವಿರುತ್ತದೆ. ಪ್ರಶ್ನೆಗಳನ್ನು ಯಾವಾಗ ಎಲ್ಲಿ ಬೇಕಾದರು ಕೇಳುವಂತಿಲ್ಲ. ಪ್ರಶ್ನೆ ಮಾಡಲು ಸಂಸತ್ತಿನಲ್ಲಿ ವ್ಯವಸ್ಥಿತ ಪದ್ಧತಿಯಿದೆ. ಅದನ್ನು ರಾಜ್ಯಶಾಸ್ತ್ರ ಭಾಷೆಯಲ್ಲಿ ಸಂಸದೀಯ ಪ್ರಶ್ನಾವಳಿ ಎಂದು ಕರೆಯಲಾಗುತ್ತದೆ. ಈ ವೇಳೆಯನ್ನು ಪ್ರಶ್ನೆ ಕೇಳಲು ಮಾತ್ರ ಸೀಮಿತಗೊಳಿಸಲಾಗಿದೆ.

## ಅರ್ಥ:

ಒಂದು ಇಲಾಖೆ ಅಥವಾ ಖಾತೆಗೆ ಸಂಬಂಧಿಸಿದ ಮಂತ್ರಿ ಅಥವಾ ಸಚಿವರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಸಂಸತ್ತಿನಲ್ಲಿ ಕೇಳುವುದಕ್ಕೆ ಸಂಸದೀಯ ಪ್ರಶ್ನಾವಳಿ ಎನ್ನುವರು. ಸಂಸತ್ತಿನ ಅಧಿವೇಶನದ ಆರಂಭದ ಒಂದು ಗಂಟೆಯ ಅವಧಿಯನ್ನು ಪ್ರಶ್ನಾವಳಿ ಸಮಯ

ಎಂದು ತಿಳಿಸಲಾಗಿದೆ. ಒಬ್ಬ ಸಂಸದರು ನಿರ್ದಿಷ್ಟ ದಿನದಂದು ನೋಟೀಸ್ ನೀಡಿದ ಐದು ಪ್ರಶ್ನೆಗಳಿಗೆ ಮೌಖಿಕ ಹಾಗೊ ಲಿಖಿತ ಉತ್ತರಗಳನ್ನು ನೀಡಬೇಕು. ಸಂಸತ್ತು ಪ್ರಜಾಪ್ರಭುತ್ವ ಹಾಗೂ ಸಂಸದೀಯ ಕಾರ್ಯವಿಧಾನಗಳ ಪವಿತ್ರ ಸ್ಥಳವಾಗಿದೆ. ಈ ಕಾರ್ಯ ವಿಧಾನಗಳನ್ನು ಸಾರ್ವಜನಿಕ ಹಿತಾಸಕ್ತಿಗನುಗುಣವಾಗಿ ಜಾರಿಗೆ ತರಲಾಗುತ್ತದೆ. ಸಂಸದರು ಸರ್ಕಾರವನ್ನು ಪ್ರಶ್ನೆಗಳ ಮೂಲಕ ನಿಯಂತ್ರಣದಲ್ಲಿಟ್ಟುಕೊಳ್ಳುತ್ತಾರೆ. ಆಡಳಿತ ಹಾಗೂ ಸರ್ಕಾರಿ ಚಟುವಟಿಕೆಯ ಪ್ರತಿಯೊಂದು ಅಂಶಗಳ ಮೇಲೆ ಪ್ರತಿಪಕ್ಷವು ಪ್ರಶ್ನೆಗಳ ದಾಳಿ ನಡೆಸಿ ಸರ್ಕಾರದ ತಪ್ಪುಗಳನ್ನು ತಿಳಿಸುತ್ತದೆ. ಪ್ರಶ್ನಾವೇಳೆಯು ಲೋಕಸಭೆಯಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 12ಗಂಟೆಯವರೆಗೆ ಇರುತ್ತದೆ. ರಾಜ್ಯಸಭೆಯಲ್ಲಿ ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ನಡೆಯುತ್ತದೆ. ಶೂನ್ಯ ಅವಧಿಯಲ್ಲಿ ಕೂಡ ಪ್ರಶ್ನೆ ಕೇಳಬಹುದು.

ಪ್ರಶ್ನೆ ಕೇಳುವ ಮೊದಲು ಸದಸ್ಯರು ನೋಟೀಸನ್ನು ಸಂಬಂಧಿತ ಸದನದ ಸೆಕ್ರೆಟರಿಯಟ್‌ಗೆ ನೀಡಬೇಕು. ಸೂಚನೆ ಸ್ವೀಕರಿಸಿದ ದಿನಾಂಕ ಹಾಗೂ ಉತ್ತರ ನೀಡುವ ದಿನಾಂಕವನ್ನು ಹೊರತುಪಡಿಸಿ 15 ದಿನಗಳನ್ನು ಪರಿಗಣಿಸಲಾಗುತ್ತದೆ. ಎರಡು ಸದನಗಳಿಗೆ ಒಬ್ಬ ಸದಸ್ಯರು ಒಂದು ನಿರ್ದಿಷ್ಟ ದಿನಕ್ಕೆ ಐದು ಪ್ರಶ್ನೆಗಳಿಗೆ ಮಾತ್ರ ನೋಟೀಸ್ ನೀಡಬಹದು ಮತ್ತು ಯಾವ ರೀತಿಯ ಪ್ರಶ್ನೆಗಳನ್ನು ಅನುಮತಿಸಬಹುದು ಎಂಬುದಕ್ಕೆ ಕಠಿಣ ಮಾರ್ಗಸೂಚಿಗಳಿದ್ದು ಸದಸ್ಯರು ಮಾರ್ಗಸೂಚಿಗಳಿಗೆ ಬದ್ಧರಾಗಿರಬೇಕು ಎಂಬ ನಿಯಮಗಳಿವೆ. ಒಂದು ಪ್ರಶ್ನೆಯು ಸಾರ್ವಜನಿಕ ಪ್ರಾಮುಖ್ಯತೆಯ ವಿಷಯವನ್ನು ಆಧರಿಸಿರಬೇಕು ಹಾಗೂ ವಾದ, ತೀರ್ಮಾನ ಮತ್ತು ಮಾನಹಾನಿಕರ ಹೇಳಿಕೆಗಳನ್ನು ಒಳಗೊಂಡಿರಬಾರದು. ಆಡಳಿತದ ಸಣ್ಣ ವಿವರಗಳು ಸರ್ಕಾರದ ದಿನನಿತ್ಯದ ಕೆಲಸಗಳಿಗೆ ಅಡ್ಡಿಯಾಗಬಾರದು. 2014ರಲ್ಲಿ ಪ್ರಶ್ನಾವಳಿ ಸಮಯವನ್ನು ರಾಜ್ಯಸಭೆಯಲ್ಲಿ 11 ಗಂಟೆಯಿಂದ 12ಗಂಟೆಗೆ ಬದಲಾಯಿಸಲಾಗಿತ್ತು. ಆದರೆ ಕೋವಿಡ್ ಅವಧಿಯಲ್ಲಿ ಕೇಂದ್ರ ಸರ್ಕಾರ ಪ್ರಶ್ನೆವೇಳೆ ಮತ್ತು ಶೂನ್ಯವೇಳೆಯನ್ನು ಮಾನ್ಸೂನ್ ಅಧಿವೇಶನದಲ್ಲಿ ಮೊಟಕುಗೊಳಿಸಲಾಗಿತ್ತು. ಎಲ್ಲಾ ಅಧಿವೇಶನಗಳಲ್ಲೂ ಮೊದಲ ಒಂದು ಗಂಟೆ ಪ್ರಶ್ನಾವಳಿಗೆ ಮೀಸಲಿಡಲಾಗಿದೆ. ಆದರೆ ರಾಷ್ಟ್ರಪತಿಯವರ ಪ್ರಾಥಮಿಕ ಭಾಷಣ ಮತ್ತು ಬಜೆಟ್ ಅಧಿವೇಶನದ ದಿನಗಳಲ್ಲಿ ಪ್ರಶ್ನಾವಳಿ ಇರುವುದಿಲ್ಲ.

ಪ್ರಶ್ನೆವೇಳೆ, ಶೂನ್ಯವೇಳೆ, ಗಮನ ಸೆಳೆಯುವ ಸೂಚನೆ, ಅರ್ಧಗಂಟೆ ಚರ್ಚೆ ಮುಂತಾದವುಗಳ ಮೂಲಕ ಸಂಸತ್ತು ಸರ್ಕಾರದ ಕಾರ್ಯವೈಖರಿಯನ್ನು ಪರಿಶೀಲಿಸುತ್ತದೆ. ಮಾರಿನ್ ಜಾನ್ಸ್ ಪ್ರಕಾರ ಪ್ರಶ್ನೆವೇಳೆ ಬಹಳ ಆಸಕ್ತಿದಾಯಕವಾಗಿರುತ್ತದೆ ಈ ಪ್ರಶ್ನೆವೇಳೆ. ಶೂನ್ಯವೇಳೆ 1962ರಿಂದ ಹೆಚ್ಚು ಪ್ರಚಲಿತವಾಗಿದೆ. 8ನೇ ಲೋಕಸಭೆಯಲ್ಲಿ ಸುಮಾರು 95.000 ಪ್ರಶ್ನೆಗಳನ್ನು ಕೇಳಲಾಗಿತ್ತು. 113 ಗಮನ ಸೆಳೆಯುವ ಸೂಚನೆಗಳು ಮಂಡಿತವಾಗಿದ್ದವು. 66 ಗಂಟೆಗಳ ಕಾಲ ಚರ್ಚೆ ಮಾಡಲಾಗಿತ್ತು. ಇಷ್ಟೆ ಅಲ್ಲದೆ ತನ್ನನ್ನು ನಿಂದಿಸಿದವರಿಗೆ ಸಂಸತ್ತು ಶಿಕ್ಷೆ ನೀಡಿದೆ.

1961ರಲ್ಲಿ ಲೋಕಸಭಾ ಸದಸ್ಯರನ್ನು ನಿಂದಿಸಿ ಬ್ಲಿಟ್ಜ ವಾರಪತ್ರಿಕೆ ಲೇಖನ ಪ್ರಕಟಿಸಿದಾಗ ಅದರ ಸಂಪಾದಕರನ್ನು ಸದನಕ್ಕೆ ಕರೆಸಿ ಖಂಡಿಸಿದೆ. 1978ರ ನವೆಂಬರ್‌ನಲ್ಲಿ

ನಡೆದ ಮರುಚುನಾವಣೆಯಲ್ಲಿ ಇಂದಿರಾಗಾಂಧಿ ಚಿಕ್ಕಮಗಳೂರು ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾದ ಮೇಲೆ ಸದನದ ಹಕ್ಕುಚ್ಯುತಿಗಾಗಿ ಡಿಸೆಂಬರ್ 19, 1978ರಲ್ಲಿ ಅಧಿವೇಶನ ಮುಕ್ತಾಯವಾಗುವವರೆಗೆ ಜೈಲು ಶಿಕ್ಷೆ ವಿಧಿಸಿ ಸದಸ್ಯತ್ವ ರದ್ದು ಮಾಡಲಾಯಿತು. ಅಂದಿನ ಪ್ರಧಾನ ಮಂತ್ರಿ ಮೊರಾರ್ಜಿ ದೇಶಾಯಿ ಮಂಡಿಸಿದ ನಿರ್ಣಯವನ್ನು ಲೋಕಸಭೆ 279-138 ಮತಗಳಿಂದ ಅಂಗೀಕರಿಸಿತು. "ಇಂದಿರಾಗಾಂಧಿ ಜೊತೆ ಅವರ ಮಾಜಿ ನಿರ್ದೇಶಕ ಡಿ. ಸೇನ್ ಇವರಿಗೂ ಲೋಕಸಭೆ ಅಧಿವೇಶನವನ್ನು ಮುಂದೂಡುವವರೆಗೆ ಜೈಲು ಶಿಕ್ಷೆ ವಿಧಿಸಿತು. ಇಂದಿರಾಗಾಂಧಿ ಪ್ರಧಾನಿಯಾಗಿದ್ದಾಗ 1972ರಲ್ಲಿ ಮಾರುತಿ ಬಗ್ಗೆ ಸಂಸತ್ ಮಾಹಿತಿ ಸಂಗ್ರಹಿಸುತ್ತಿದ್ದ ಕೈಗಾರಿಕಾ ಇಲಾಖೆಯ 4 ಅಧಿಕಾರಿಗಳನ್ನು ತೊಂದರೆಗೆ ಒಳಪಡಿಸಿದರೆಂದೂ ಆಪಾದಿಸಲಾಗಿತ್ತು. ಈ ಕಾರಣದಿಂದ ಇಂದಿರಾಗಾಂಧಿಯವರು ಸದನದ ಹಕ್ಕುಚ್ಯುತಿಗೆ ಒಳಗಾದರು. ಭಾರತದ ಇತಿಹಾಸದಲ್ಲಿ ಸಂಸತ್ ಮಾಜಿ ಪ್ರಧಾನಿಯನ್ನು ಸದನದ ಹಕ್ಕುಚ್ಯುತಿಗಾಗಿ ಜೈಲಿಗೆ ಕಳುಹಿಸಿ ಸದಸ್ಯತ್ವದಿಂದ ಉಚ್ಚಾಟನೆ ಮಾಡಿದ್ದು ಮರೆಯಲಾಗದ ಘಟನೆಯಾಗಿದೆ."

ಭಾರತದ ಸಂಸತ್ತಿನಲ್ಲಿ ಪ್ರಶ್ನೋತ್ತರ ವಿಧಗಳನ್ನು 4 ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

1. ಚುಕ್ಕೆ ಗುರುತಿನ ಪ್ರಶ್ನೆಗಳು
2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು
3. ಖಾಸಗಿ ಸದಸ್ಯರನ್ನು ಕುರಿತು ಪ್ರಶ್ನೆಗಳು
4. ಅಲ್ಪಾವಧಿ ಸೂಚನೆಯ ಪ್ರಶ್ನೆಗಳು

**ಚುಕ್ಕೆ ಗುರುತಿನ ಪ್ರಶ್ನೆಗಳು:**

ಚುಕ್ಕೆ ಅಥವಾ ನಕ್ಷತ್ರಾಕಾರದ ಚಿಹ್ನೆಯನ್ನು ಗುರುತಿಸಲಾಗುತ್ತದೆ. ಆದ್ದರಿಂದ ಚುಕ್ಕೆ ಗುರುತಿನ ಪ್ರಶ್ನೆಗಳು ಎನ್ನುತ್ತಾರೆ. ತಾರಾಂಕಿತ ಪ್ರಶ್ನೆಗಳು ಎಂದು ಸಹ ಕರೆಯುತ್ತಾರೆ. ಈ ಪ್ರಶ್ನೆಗಳಿಗೆ ಉತ್ತರ ನೀಡಿದ ಮೇಲೆ ಒಂದು ಪೂರಕ ಪ್ರಶ್ನೆ ಕೇಳಲು ಅವಕಾಶವಿರುತ್ತದೆ. ಒಂದು ದಿನಕ್ಕೆ 15ರಿಂದ 20 ಚುಕ್ಕೆ ಗುರುತಿನ ಪ್ರಶ್ನೆ ಕೇಳಲು ಅವಕಶವಿರುತ್ತದೆ. ಈ ಪ್ರಶ್ನೆಗಳನ್ನು ನಿರ್ದಿಷ್ಟ ಇಲಾಖೆಗೆ ಪ್ರಶ್ನೆ ಕೇಳಲು ಸಂಸದರು ಕನಿಷ್ಟ 10 ದಿನಗಳು ಅಥವಾ ಗರಿಷ್ಟ 21 ದಿನಗಳ ಮುನ್ನವೇ ಸೂಚನೆ ನೀಡಬೇಕು. ಸಭಾಧ್ಯಕ್ಷರು ನಿಗದಿಪಡಿಸಿದ ದಿನದಂದು ಅಧಿವೇಶನದ ಸಮಯದಲ್ಲಿ ಪ್ರಶ್ನೆ ಕೇಳಲು ಅವಕಾಶ ಕಲ್ಪಿಸಲಾಗಿದೆ. ಲೋಕಸಭೆ ಸದಸ್ಯರು ಕೇಳುವ ಚುಕ್ಕೆ ಗುರುತಿನ ಪ್ರಶ್ನೆಗಳು ಹಸಿರು ಬಣ್ಣದಲ್ಲಿ ಮತ್ತು ರಾಜ್ಯಸಭಾ ಸದಸ್ಯರು ಕೇಳುವ ಚುಕ್ಕಿ ಗುರುತಿನ ಪ್ರಶ್ನೆಗಳನ್ನು ಗುಲಾಬಿ ಬಣ್ಣದಲ್ಲಿ ಮುದ್ರಿಸಲಾಗಿರುತ್ತದೆ. ಮೌಖಿಕ ಉತ್ತರವನ್ನು ಸದನದಲ್ಲಿ ನೀಡಬಹುದು.

**ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು:**

ಸಂಸತ್ತಿನ ಸದಸ್ಯರು ನಿರ್ದಿಷ್ಟ ಮಂತ್ರಿಯಿಂದ ಲಿಖಿತ ಉತ್ತರ ಬಯಸಿದರೆ ಚುಕ್ಕೆ

ಗುರುತಿಲ್ಲದ ಪ್ರಶ್ನೆ ಕೇಳಲು ಅವಕಾಶವಿರುತ್ತದೆ. ಆದರೆ ಪೂರಕ ಪ್ರಶ್ನೆಗಳಿಗೆ ಅವಕಾಶವಿರುವುದಿಲ್ಲ. ಒಂದು ದಿನಕ್ಕೆ 230 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನು ಪಟ್ಟಿ ಮಾಡಿ ಉತ್ತರ ನೀಡಲಾಗುವುದು. ರಾಷ್ಟ್ರಪತಿ ಆಳ್ವಿಕೆ ಅಸ್ತಿತ್ವದಲ್ಲಿದ್ದರೆ ಹೆಚ್ಚುವರಿ 25 ಪ್ರಶ್ನೆಗಳನ್ನು ಕೇಳಲು ಅವಕಾಶವಿರುತ್ತದೆ. ಆದರೆ ಸಂಬಂಧಿಸಿದ ಮಂತ್ರಾಲಯಕ್ಕೆ ಕನಿಷ್ಟ 10 ದಿನಗಳು ಮತ್ತು ಗರಿಷ್ಟ 21 ದಿನಗಳ ಮುಂಚಿತವಾಗಿ ಸೂಚನೆ ನೀಡಬೇಕಾಗುತ್ತದೆ. ಈ ಪ್ರಶ್ನೆಗಳು ಲೋಕಸಭೆಯಲ್ಲಿ ಬಿಳಿಬಣ್ಣದಿಂದ ಮುದ್ರಿಸಲಾಗುತ್ತದೆ. ರಾಜ್ಯಸಭೆಯಲ್ಲಿ ಹಳದಿಬಣ್ಣದಲ್ಲಿ ಮುದ್ರಿಸಲಾಗುತ್ತದೆ. ಇಲ್ಲಿ ಚರ್ಚೆಗೆ ಅವಕಾಶವಿಲ್ಲದೆ ಮಾಹಿತಿ ರವಾನಿಸಬಹುದು.

**ಖಾಸಗಿ ಸದ್ಯರನ್ನು ಕುರಿತಾದ ಪ್ರಶ್ನೆಗಳು:**

ಸಂಸತ್ತಿನ ಸದಸ್ಯರನ್ನು ಪ್ರಶ್ನಿಸುವಂತೆಯೆ ಖಾಸಗಿ ಸದಸ್ಯನನ್ನು ಕೇಳುವ ಪ್ರಶ್ನೆಗಳಿಗೆ ಖಾಸಗಿ ಸದಸ್ಯರನ್ನು ಕುರಿತಾದ ಪ್ರಶ್ನೆಗಳು ಎನ್ನುತ್ತಾರೆ. ಈ ವೇಳೆಯಲ್ಲಿ ಖಾಸಗಿ ಮಸೂದೆ ಮಂಡಿಸಿದ ನಿರ್ಣಯ ಅಥವಾ ಪ್ರತಿಪಾದಿಸಿದ ನಿಯಮಗಳನ್ನು ಕುರಿತಂತೆ ಖಾಸಗಿ ಸದಸ್ಯರನ್ನು ಕುರಿತ ಪ್ರಶ್ನೆಗಳು ಕಂಡು ಬರುತ್ತವೆ.

**ಅಲ್ಪಾವಧಿ ಸೂಚನೆಯ ಪ್ರಶ್ನೆಗಳು:**

ಸಾರ್ವಜನಿಕ ಮಹತ್ವವುಳ್ಳ ವಿಚಾರಗಳನ್ನು ಕುರಿತು ಕಡಿಮೆ ಸಮಯದಲ್ಲಿ ಸಂಬಂಧಿಸಿದ ಮಂತ್ರಿಯಿಂದ ಉತ್ತರ ಪಡೆಯಲು ಬಯಸುವ ಪ್ರಶ್ನೆಗಳೆ ಅಲ್ಪಾವಧಿ ಸೂಚನೆಯ ಪ್ರಶ್ನೆಗಳು ಎನ್ನಲಾಗುತ್ತದೆ. ಕನಿಷ್ಟ 10 ದಿನಗಳಿಗಿಂತ ಕಡಿಮೆ ಅವಧಿಯಲ್ಲಿ ಸೂಚನೆ ನೀಡಿ ಸಂಸದರು ಉತ್ತರ ಪಡೆಯಬಹುದಾಗಿದೆ. ಸಂಬಂಧಿಸಿದ ಮಂತ್ರಿಯು ಮೌಖಿಕ ಉತ್ತರ ನೀಡಬೇಕು. ಅಲ್ಪಾವಧಿ ಸೂಚನೆಯ ಪ್ರಶ್ನೆಗಳು 150 ಪದಗಳನ್ನು ಮೀರಿರಬಾರದು. ಅಲ್ಪಾವಧಿ ಸೂಚನೆಯ ಪ್ರಶ್ನೆಗಳು ತಿಳಿಗುಲಾಬಿ ಬಣ್ಣದಲ್ಲಿ ಮುದ್ರತವಾಗಿರುತ್ತದೆ. ಹಾಗೂ ಪೂರಕ ಪ್ರಶ್ನೆಗೆ ಅವಕಾಶವಿರುತ್ತದೆ.

**ಉಪಸಂಹಾರ:**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕೆಂದರೆ ನಿರ್ಲಕ್ಷಿತ ವರ್ಗದ ನೋವು, ಕಡೆಗಣಿಸಲ್ಪಟ್ಟ ಕ್ಷೇತ್ರದ ಕೂಗು, ಆದ್ಯತೆ ನೀಡದ ವಿವಿಧ ರಂಗಗಳ ಸಮಸ್ಯೆಗಳನ್ನು ಸರ್ಕಾರಕ್ಕೆ ಅಂದರೆ ಮಂತ್ರಿಮಂಡಲಕ್ಕೆ ಮಾಹಿತಿಯನ್ನು ತಲುಪಿಸಲು ಸಂಸದೀಯ ಪ್ರಶ್ನೆಗಳು ಸಹಕಾರಿಯಾಗಿವೆ. ಜನರ ಕಲ್ಯಾಣಕಾರ್ಯಗಳಲ್ಲಿ ಇರುವ ದೋಷಗಳನ್ನು ಸಂಸದರು ಪ್ರಶ್ನಿಸುತ್ತಿದ್ದರೆ ಪ್ರಜಾಪ್ರಭುತ್ವ ವ್ಯವಸ್ಥೆ ಸದೃಡವಾಗಿರುತ್ತದೆ.

## ಪರಾಮರ್ಶನ ಗ್ರಂಥಗಳು:

1. ಪಾಟಿಲ್ ಎನ್. ಬಿ. & ಶೀಲವಂತರ್ ಜಿ. ಬಿ. (2022). ಭಾರತ ಸರ್ಕಾರ ಮತ್ತು ರಾಜಕೀಯ ಹಾಗೂ ಭಾರತದ ಸಂಸದೀಯ ಕಾರ್ಯವಿಧಾನಗಳು. ಅರುಣ ಪ್ರಕಾಶನ. ವಿಜಯಪುರ.
2. ರಾಜಶೇಖರ ಹೆಚ್. ಎಂ. (2013). ಭಾರತ ಸರ್ಕಾರ ಮತ್ತು ರಾಜಕೀಯ. ಕಿರಣ್ ಪ್ರಕಾಶನ. ಮೈಸೂರು.
3. ರಮೇಶ ಶಂಕರರೆಡ್ಡಿ. (2022). ಭಾರತದಲ್ಲಿನ ಸಂಸದೀಯ ಕಾರ್ಯವಿಧಾನಗಳು. ವೈಭವ ಪಬ್ಲಿಕೇಶನ್ಸ್. ಗದಗ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.